# ದಾಖಲೆ ಲಕ್ಷ..





ಶಿವಮೊಗ್ಗ ಸಮೀಪದ ಹೊಳೆಹೊನ್ನೂರಿನ ಪಂಕಜಾ ಆಚಾರ್ ಅವರು ಮನೆಗೆಲಸಗಳ ಮಧ್ಯೆ ಅಧ್ಯಾತ್ಮ ಚಿಂತನೆ ಮಾಡುತ್ತಾ ಒಂದು ಲಕ್ಷ ರಾಮನಾಮ, ಒಂದು ಲಕ್ಷ ಶಂಕ ಚಕ್ರ, ಒಂದು ಲಕ್ಷ ಗೋ ಪದ್ಮಗಳನ್ನು ರಂಗೋಲಿ ಪುಡಿಯಲ್ಲಿ ಬಿಡಿಸಿದ್ದಾರೆ. ಒಂದು ಲಕ್ಷ ಹೂ ಬತ್ತಿ ಮಾಡಿ ದೀಪ ಹಚ್ಚಿದ್ದಾರೆ. ಒಂದು ಲಕ್ಷ ಆರತಿ ಬತ್ತಿ ಮಾಡಿದ್ದಾರೆ. ಒಂದು ಲಕ್ಷ ಬಳೆಗಳನ್ನು ದಾನ ಮಾಡಿದ್ದಾರೆ. ಹೀಗೆ ಮುಂದುವರೆಯುತ್ತಿದೆ, ಅವರ ಒಂದು ಲಕ್ಷದ ಸಂಕಲ್ಪ. 65ರ ಪ್ರಾಯದ ಪಂಕಜಾ ಇದನ್ನು ಸಾಧನೆಯೆಂದುಕೊಂಡಿಲ್ಲ, ಭಗವಂತನ ಸೇವೆ, ಸ್ಮರಣೆ ಆತ್ಮತೃಪ್ತಿ ಕೊಟ್ಟಿದೆ ಎನ್ನುತ್ತಾರೆ.

**-ಸುಲೋಚನಾ ವಾದಿರಾಜ್, ಶಿವಮೊಗ್ಗ**



# ಬಲು ಅಪರೂಪದ ಕೈಗಾಡಿ

ಈ ಮೊದಲೆಲ್ಲ ದಾಸ್ತಾನು ದಿನಸಿ ಅಂಗಡಿ, ಕಟ್ಟಿಗೆ ಡಿಪೋಗಳಲ್ಲಿ ಕೈಗಾಡಿಗಳು ಕಾಣಸಿಗುತ್ತಿದ್ದವು. ದಿನಸಿ ಸಾಮಾನು, ಮನೆ ನಿರ್ಮಾಣದ ಸಾಮಗ್ರಿಗಳನ್ನು ಸಾಗಿಸಲು ಹಾಗೂ ರೈತರ ಕೃಷಿ ಉತ್ಪನ್ನಗಳನ್ನು ಮಾರುಕಟ್ಟೆಗೆ ಸಾಗಿಸಲು, ಕೈಗಾಡಿಗಳು ಬಹು ಬೇಡಿಕೆಯ ಸಾಧನಗಳಾಗಿದ್ದವು. ಕೆಲವರು ಗಂಟೆಯ ಆಧಾರದಲ್ಲಿ ಕೈಗಾಡಿಯನ್ನು ಬಾಡಿಗೆಗೆ ನೀಡುತ್ತಿದ್ದರು. ಅದಕ್ಕೆಂದೇ ಕೈಗಾಡಿ ತಳ್ಳುವ ಕಾರ್ಮಿಕರು ಇರುತ್ತಿದ್ದರು. ಸರಕು ಸಾಗಾಟಕ್ಕೆ ಈಗ ಘನ ಲಘು ವಾಹನ ಬಂದ ತರುವಾಯ ಕೈಗಾಡಿಗಳು ಮೂಲೆ ಸೇರಿವೆ. ಆದರೂ ಉಡುಪಿ ನಗರದ ಕಟ್ಟಿಗೆ ಡಿಪೋವೊಂದರಲ್ಲಿ ಈಗಲೂ ಕೈಗಾಡಿಗಳನ್ನು ಕಟ್ಟಿಗೆ ಸಾಗಿಸಲು ಬಳಕೆ ಮಾಡುತ್ತಿರುವುದು ಕಂಡು ಬಂತು. ವಾಹನ ದಟ್ಟಣೆ, ಜನಜಂಗುಳಿಯ ನಗರದ ರಸ್ತೆಗಳಲ್ಲಿ ಕೈಗಾಡಿಗಳನ್ನು ತಳ್ಳುವುದೆಂದರೆ ಸಾಧನೆಯೇ ಸರಿ..!

**ಚಿತ್ರ- ಬರಹ: ತಾರಾನಾಥ್ ಮೇಸ್ತ, ಶಿರೂರು**

# ಶಾಂತಿನಾಥ ದೇಸಾಯಿಯವರ ಶಾಲಾ ವಾಹನ

ಖ್ಯಾತ ಸಾಹಿತಿ ಪ್ರೊ. ಶಾಂತಿನಾಥ ದೇಸಾಯಿಯವರು ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದ ಆಗರ್ಭ ಶ್ರೀಮಂತ ರಾಜಮನೆತನದಲ್ಲಿ ಜನಿಸಿದ್ದರು. ಹಳಿಯಾಳ ಉತ್ತರ ಕನ್ನಡ ಜಿಲ್ಲೆಗೆ ಸೇರಿದ್ದರೂ ಧಾರವಾಡಕ್ಕೆ ಬಹಳ ಹತ್ತಿರವಾಗಿದೆ. ಪ್ರೊ. ದೇಸಾಯಿಯವರು ತಮ್ಮ ಬಾಲ್ಯದ ದಿನಗಳಲ್ಲಿ ಜಟಕಾಬಂಡಿಯನ್ನು ಹೋಲುವ ಕುದುರೆ ಗಾಡಿಯಲ್ಲಿ ಶಾಲೆಗೆ ಹೋಗುತ್ತಿದ್ದರು. ದೇಸಾಯಿ ಮನೆತನದ ದ್ಯೋತಕವಾಗಿ ಆ ಕುದುರೆ ಗಾಡಿಯಲ್ಲಿ ಬೆಲೆ ಬಾಳುವ ಹಾಸಿಗೆ ಮತ್ತು ದಿಂಬುಗಳಿದ್ದವು. ಪ್ರತಿನಿತ್ಯ ಅವರು ರಾಜ ವೈಭವದ ಸಂಕೇತವಾಗಿ ಜರಿ ಟೋಪಿ ಧರಿಸುತ್ತಿದ್ದರು.

ಒಂದು ದಿನ ಶಾಲೆಗೆ ಹೋಗುತ್ತಿದ್ದಾಗ ದಾರಿಯಲ್ಲಿ ಹುಚ್ಚನೊಬ್ಬ ಅವರ ವಾಹನಕ್ಕೆ ಅಡ್ಡ ನಿಂತು ಅವರ ಟೋಪಿಯನ್ನು ಕಿತ್ತುಕೊಂಡು ಚಿಂದಿ ಮಾಡಿ ಬಿಸಾಡಿದ. ಶಾಂತಿನಾಥ ದೇಸಾಯಿಯವರು ಆ ಹುಚ್ಚನ ಮೇಲೆ ಕೋಪಗೊಳ್ಳಲಿಲ್ಲ. ಅಂದಿನಿಂದಲೇ ಶಾಲಾ ವಾಹನದಲ್ಲಿ ಹೋಗುವಾಗ ಧರಿಸುತ್ತಿದ್ದ ಜರೀ ಟೋಪಿ ಹಾಕುವುದನ್ನು ನಿಲ್ಲಿಸಿದರು. ಅವರು ಬಳಸುತ್ತಿದ್ದ ಶಾಲಾ ವಾಹನವನ್ನು ಧಾರವಾಡದ ಮಹಾನಗರ ಪಾಲಿಕೆಯ ಆವರಣದಲ್ಲಿರುವ ಡಾ.ಸುಧಾ ಮೂರ್ತಿ ವಸ್ತು ಸಂಗ್ರಹಾಲಯದಲ್ಲಿ ಇರಿಸಲಾಗಿದೆ.

**-ಪಂಪಾಪತಿ ಹಿರೇಮಠ, ಧಾರವಾಡ**

